Geetha Shishu Shikshana Sangha (R)

SIMHA SUBBAMAHALAKSHMI FIRST GRADE COLLEGE

KRS ROAD, MYSURU-570 016

ಯಶಸ್

**YASHAS** a SSFGC Weekly Newsletter

**Volume – 1** **Issue No. – 7** **13th July 2019**

# Make use of Startup India

- **Smt Anupama B Pandit,**
**Administrative Officer, GSSSIETW**

**(Add on Course in Insurance a Report on Convocation Program)**




Smt Anupama B Pandit, the Administrative Officer GSSSIETW, the chief guest of the convocation program of first Add on Course Insurance, quoted from Rig Veda extolling the virtue of knowledge "let knowledge come from all directions", She also spoke about the importance of having skills along with graduation to create a lucrative career. Students were advised to follow Your Story, The Better India and Skill India on the Social media for inspirational stories of people who have tasted success with their skill and knowledge. She also announced that the next Add On Course would be 'Agri-Com'

"Organic farming and agriculture are today seen as lucrative business by technically educated youth, some of them have given up high paying jobs in M N C s to take up scientific farming", she said. She encouraged the students to make use of the start-up funding provided by the government for the youth who are interested in starting their own business. "Insurance as a career" was the first in the series of Add On Course started for the UG students along with the curriculum. All the students enrolled for the course which was provided free of cost. The main objective was to enable them to earn while pursuing studies.

On 12th July 2019, all students were awarded the certificates on successfuly completed of the course. “75 candidates including 3 lecturers took up the exam held on 11th July 2019 at the college campus and all of them qualified themselves in the exam with flying colors” –quoted the Asst. Prof in English Sri Anil M, who is also the coordinator for the Add On Course.






Sri Venkatesh Rao H Y, Rtd Principal, DTI, LIC, Convener of Add On Course, in his observations spoke about the career in insurance seeking self-sufficiency in student life by becoming an LIC agent. He praised the students for their reciprocation to the course; his speech was concluded with a word of caution to the students to not neglect their academics for the sake of earning.




In her opinion, Likitha M of II B.Com expressed her gratefulness to the management, Director and everyone involved in designing and introducing such a course for students who can start a career in insurance side by side while still in college.

Mujassim Pasha, III B.Com student was all praises for the course which was very informative and helpful in building a career path. He looked forward for the forthcoming Add On Course.

The Chief Guest, the Director and the Convener of Insurance course awarded convocation certificates to the student which was followed by the Presidential Address.




Dr K V Prabhakara, Director SSFGC, in his Presidential address expressed a sense of fulfillment on successful completion of the course, and living up to the promise made by him to the students, parents and the management. He congratulated the students for successfully completing the course and was very happy to r receive positive response about the course from the students.

In his address, he made a reference to the New Education Policy being drafted for 2020 by the former Vice Chancellor Kasturi Rangan. He said, "Vocation based Education is in drafting stage but it has already been successfully implemented by the management of SSFGC College". He also made an announcement that the new add on course "Agri Comm" would be conducted by Mr Shetty of Lab land. The program was concluded with the Vote of Thanks by Likith Babu of III B.Com.

## Invest or Perish - Trinesha T R

### Special Lecture on 'Investment Awareness'

*An Investment is a monetary asset purchased with the idea that it will provide income in the future or will later be sold at a higher price for a profit- Investopedia*



Prof Trinesha T R created awareness about Investment among the students through his special lecture focusing on the importance of investment, time to invest and planning for investment.

Future is uncertain, therefore it is necessary to set aside a part of ones earnings for contingent expenses. Returns on idle resources, funding a specific goal, tax advantages are the important reasons for investing.

Safety, Liquidity & Profitability are the important aspects which should be taken care of before investing. While planning for investment, one should set goals of investment, assess financial needs, set aside disposable income and have an appetite for taking risks. Fixed deposits in banks, insurance policies, investing in real estate, gold, bullion, commodities etc are some avenues for investment. Derivatives are the latest form of investment. Futures and options, risk hedging, speculation market are various kinds of investment in derivatives.

Interaction session was lively with students asking questions about Sensex, Nifty and options available for investing in real estate. Smt Poornima K, HOD commerce summed up the lecture, followed by vote of thanks by Ms Anusha acharya of II B.Com. Shantha Nadam of III B.Com compered the program.

**-Smt. Poornima K**
Head of the Dept.
Commerce



On 10th July 2019, an interaction session was organised with respect to add on course Insurance and banking. Students interacted with the Insurance development officers. Sri Eshwar and Sri Janardhan, answered various questions posed by the students for considering Insurance as career to earn while learning. Add on resource person Sri Venktesh Rao H Y was also present in facilitating the interaction.

# ಆಧುನಿಕ ಜೀವನ ಶೈಲಿ ಮತ್ತು ಮನುಷ್ಯ

**(ವ್ಯಕ್ತಿತ್ವ ವಿಕಸನ ಬರೆಹ)**

***-ಪ್ರೊ. ಜಿ. ಚಂದ್ರಶೇಖರ್***
***ಸಂದರ್ಶಕ ಪ್ರಾಧ್ಯಾಪಕರು, ಹಿಂದಿ ವಿಭಾಗ***
***ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು***



***(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)***

ಮನುಷ್ಯನಿಗೆ ಹೇಗೆ ಶಾರೀರಿಕ ಆರೋಗ್ಯ ಮುಖ್ಯವೋ ಹಾಗೆಯೇ ಮಾನಸಿಕ ಆರೋಗ್ಯ ಕೂಡ ಅತಿಮುಖ್ಯ. ಹೊರನೋಟಕ್ಕೆ ದೇಹವೇನೋ ಸದೃಢವಾಗಿಯೇ ಕಾಣುತ್ತದೆ. ಆದರೆ ಮಾನಸಿಕ ದೃಢತೆ ಮಾಯವಾಗಿದೆ. ಹಿಂಜರಿಕೆ ತಲೆಯೆತ್ತುತ್ತಿದೆ. ಭಯ ಆವರಿಸಿಕೊಳ್ಳುತ್ತಿದೆ. ದಿನೇ ದಿನೇ ಪ್ರಪಂಚದಲ್ಲಿ ಜನ ಮಾನಸಿಕ ಒತ್ತಡಗಳಿಗೆ ಒಳಗಾಗಿದ್ದಾರೆ, ತೀವ್ರ ತರದ ಖಿನ್ನತೆಗೆ ಗುರಿಯಾಗುತ್ತಿದ್ದಾರೆ. ಹೀಗಾಗಿ ಮನೋವೈದ್ಯಕೀಯ ಸಲಹೆಗಾರರ ಕೊರತೆ ಎದ್ದು ಕಾಣುತ್ತದೆ. ದಶಕಗಳ ಹಿಂದೆ ಪ್ರಾರಂಭವಾದ ಐ.ಟಿ ಮತ್ತು ಬಿ.ಟಿ ಕಂಪನಿಗಳಿಂದಾಗಿ ಯುವಕ ಯುವತಿಯರು ಮನೋ ಒತ್ತಡಗಳಿಗೆ ಒಳಗಾಗುತ್ತಿದ್ದಾರೆ. ಅವರಿಗೆ ಸಲಹೆ ಕೊಡಲು ಸಾಕಷ್ಟು ಸಂಖ್ಯೆಯಲ್ಲಿ ಸಲಹಾ ಕೇಂದ್ರಗಳು ರಾಜ್ಯ ರಾಜಧಾನಿ ಬೆಂಗಳೂರಿನಂತಹ ನಗರದಲ್ಲಿ ಕೂಡ ಇಲ್ಲ ಎನ್ನುವ ವರದಿ ಅಚ್ಚರಿ ಮೂಡಿಸುತ್ತದೆ.

ಮಾನಸಿಕ ಆರೋಗ್ಯ ಹದಗೆಟ್ಟರೆ ಅದರ ಪರಿಣಾಮ ಆತನ ಅಥವಾ ಆಕೆಯ ಮೇಲಷ್ಟೇ ಅಲ್ಲ, ಇಡೀ ಸಮಾಜದ ಮೇಲೆ, ವ್ಯವಸ್ಥೆಯ ಮೇಲೆ ಬೀರುತ್ತದೆ. ಕೌಟುಂಬಿಕ ಕಲಹಗಳಿಗೆ ನಾಂದಿಯಿಡುತ್ತದೆ. ಸಂಬಂಧಗಳು ಹಳಸಿಕೊಳ್ಳುತ್ತವೆ. ಪ್ರೀತಿ, ಮಮತೆ, ವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಈ ಮಾನಸಿಕ ಒತ್ತಡದಿಂದ ಹೊರಬರಲು ಅನೇಕ ರೀತಿಯ ಔಷಧಿಗಳ ಮೊರೆ ಹೋಗಬೇಕಾಗುತ್ತದೆ. ನಿರಂತರವಾಗಿ, ಅಂದರೆ ದೀರ್ಘಕಾಲಿಕ ಸೇವನೆಯಿಂದ ಅದು ಮನಸ್ಸಿನ ಮೇಲೆ ಬೇರೆಯದೇ ರೀತಿಯ ಹಾನಿಕಾರಕ ಪರಿಣಾಮವನ್ನುಂಟುಮಾಡುತ್ತವೆ. ಒಂದು ರೋಗ ಹೋಗಿ ಅದರ ಜಾಗದಲ್ಲಿ ನಾಲ್ಕು ಹೊಸ ರೋಗಗಳು ಬಂದು ಕೂರುತ್ತವೆ. ಆತ್ಮಹತ್ಯೆಯ ಕಡೆ ಕೂಡ ಕರೆದೊಯ್ಯುತ್ತದೆಂದು ಪ್ರಯೋಗದಿಂದ ತಿಳಿದುಬರುತ್ತದೆ. ಅಥವಾ ಇದನ್ನು ಮರೆಯಲು ಬೇರೆ ರೀತಿಯ ಮನರಂಜನೆಗಳಿಗೆ ಮನಸ್ಸು ಕೊಡಬಹುದು. ಇದು ಇನ್ನೂ ಭಯಾನಕ. ಮನಸ್ಸಿನ ಜೊತೆ ಜೊತೆಗೆ ಆರ್ಥಿಕ ಹಾಗೂ ಸಾಮಾಜಿಕ ಪತನಕ್ಕೂ ಕಾರಣವಾಗಬಹುದು. ಹೀಗಾಗಿ ಮನೋ ಚಿಕಿತ್ಸೆಗೆ ಬಳಸುವ ಔಷಧಿಗಳಿಂದ ದೂರವಿರುವುದೇ ಲೇಸು.

ಇಂದಿನ ಜೀವನ ವಿಧಾನ ಅಥವಾ ಕ್ರಮ ವಿಶೇಷವಾಗಿ ಹದಿಹರೆಯದವರ ಮೇಲೆ ಗಾಢವಾದ ದುಷ್ಪರಿಣಾಮ ಬೀರುವುದರಲ್ಲಿ ಸಂದೇಹವೇ ಇಲ್ಲ. ಎಲ್ಲ ರೀತಿಯ ಭೋಗ ಜೀವನಕ್ಕೆ ದಾಸರಾಗಿಬಿಡುತ್ತಾರೆ. ಶಾರೀರಿಕ ಶ್ರಮವೆಂದರೇನೆಂದೇ ಗೊತ್ತಿರದ ಮಟ್ಟಕ್ಕೆ ಬೆಳೆದು ಬಿಟ್ಟಿರುತ್ತಾರೆ.

ಚಟಗಳು ಅವರನ್ನಾಳತೊಡಗುತ್ತವೆ. ಜೀವನವೆಂದರೆ ಭೋಗಿಸುವುದು ಎಂಬಷ್ಟರಮಟ್ಟಿಗೆ ಅವರ ತಲೆಕೆಟ್ಟಿರುತ್ತದೆ. ಆಧುನಿಕ ಜೀವನ ಶೈಲಿ ವ್ಯಕ್ತಿಯ ಮೇಲೆ ವಿಶೇಷವಾಗಿ ಹದಿಹರೆಯದವರ ಮೇಲೆ ಹೇಗೆ ಪರಿಣಾಮ ಬೀರುತ್ತದೆಂದರೆ- ಶಾರೀರಿಕ, ಮಾನಸಿಕ ಹಾಗೂ ಭಾವನಾತ್ಮಕ ಒತ್ತಡಕ್ಕೊಳಗಾಗುತ್ತಾನೆ, ಕೌಟುಂಬಿಕ ಸಂಬಂಧಗಳು ಹದಗೆಡುತ್ತವೆ, ಸಮಾಜದಲ್ಲಿ ಹಿಂಸೆ ಮತ್ತು ಕ್ರೌರ್ಯ ವಿಜೃಂಭಿಸುತ್ತವೆ. ಭ್ರಷ್ಟಾಚಾರ, ಅಪ್ರಮಾಣಿಕತೆ, ಅನೈತಿಕತೆ ಹೆಚ್ಚಾಗುತ್ತದೆ. ಮಾದಕ ವಸ್ತುಗಳ ವ್ಯಸನಿಗಳಾಗುತ್ತಾರೆ, ಶೋಷಣೆಗೊಳಗಾಗುತ್ತಾರೆ ಅಥವಾ ಶೋಷಕರಾಗುತ್ತಾರೆ.

ಇಷ್ಟೆಲ್ಲ ಅನಿಷ್ಟಗಳ ನಡುವೆ ನಾವಿದ್ದೇವೆ ಎಂದರೆ ಇವುಗಳ ಪರಿಣಾಮ ಸಮಾಜದಲ್ಲಿ ಅಥವಾ ವ್ಯಕ್ತಿಯಲ್ಲಿ ಹೇಗೆ ಕಾಣಿಸಿಕೊಳ್ಳುತ್ತವೆ ಎನ್ನುವುದೂ ಕೂಡ ಮುಖ್ಯವಾಗುತ್ತದೆ. ಉದಾಹರಣೆಗೆ- ದಿನೇ ದಿನೇ ಜೀವನ ಮೌಲ್ಯಗಳು ಕುಸಿಯುತ್ತವೆ, ಭೌತಿಕ ವಸ್ತುಗಳ ಕಡೆಗೆ ಎಲ್ಲರೂ ಆಕರ್ಷಿತರಾಗುತ್ತಿದ್ದಾರೆ, ಎಲ್ಲವೂ ಆರಾಮಾಗಿ ಇದ್ದು ಬಿಡಬೇಕು, ಯಾವುದಕ್ಕೂ ಕಷ್ಟಪಡಬಾರದೆನ್ನುವ ಪ್ರವೃತ್ತಿ ಬೆಳೆಯುತ್ತದೆ. ಮಿತಿಯಿಲ್ಲದ ಆಸೆ-ಆಕಾಂಕ್ಷೆಗಳು, ಧ್ಯೇಯಗಳು, ಗುರಿಗಳು ತೆಲೆಯುತ್ತುತ್ತಿವೆ. ಅನುಕಂಪವಿಹೀನ, ಕಾರುಣ್ಯ ರಹಿತ, ಸೇವಾಭಾವವಿಲ್ಲದ ಸಮಾಜ ನಿರ್ಮಾಣಗೊಳ್ಳುತ್ತಿದೆ, ಅತಿಯಾದ ದುರಾಸೆ, ಹಣದ ಲಾಲಸೆ ಉಲ್ಬಣಗೊಳ್ಳುತ್ತಿದೆ, ಸ್ವಾರ್ಥಪರತೆ ತುಂಬಿ ತುಳುಕುತ್ತಿದೆ, ಅಸ್ವಸ್ಥ ಜೀವನ ವಿಧಾನ, ಶಿಕ್ಷಣದಲ್ಲಿ ಮೌಲ್ಯಗಳ ಕುಸಿತ.

ಶಿಕ್ಷಣದ ಮುಖ್ಯ ಉದ್ದೇಶವೆಂದರೆ, ವ್ಯಕ್ತಿಯ ವ್ಯಕ್ತಿತ್ವದ ನಿರ್ಮಾಣ, ಮಾನಸಿಕ ಸಮತೋಲನ, ಮನಃಶಾಂತಿ ಮುಂತಾದ ಒಳ್ಳೆಯ ಗುಣಲಕ್ಷಣಗಳನ್ನು ಕಲಿಸಿಕೊಡುವುದು. ಆದುದರಿಂದ ಮೇಲೆ ಹೆಸರಿಸಿದ ಎಲ್ಲವನ್ನು ಧಿಕ್ಕರಿಸಿ ಹಣಮಾಡುವುದು ಹೇಗೆ? ಅದೂ ಸುಲಭವಾಗಿ ಹಣ ಸಂಪಾದನೆಯ ಮಾರ್ಗೋಪಾಯಗಳ ಬಗ್ಗೆ ತರಬೇತಿ ನೀಡುತ್ತಿದ್ದೇವೆ. ಮನುಷ್ಯನ ಮನೋವಿಕಸನಕ್ಕೆ ಸಂಬಂಧಪಟ್ಟ ಪಠ್ಯಕ್ರಮ ಇಲ್ಲವಾಗಿದೆ. ಬೌದ್ಧಿಕಮಟ್ಟ ಹೆಚ್ಚಿಸುವುದೆಂದರೆ ಹೆಚ್ಚು ಅಂಕಗಳಿಸುವುದು ಎಂಬಷ್ಟರ ಮಟ್ಟಿಗೆ ಸೀಮಿತಗೊಂಡಿದೆ. ಒಬ್ಬ ಪ್ರತಿಭಾವಂತ ವಿಜ್ಞಾನಿ ಆತ್ಮಹತ್ಯೆ ಮಾಡಿಕೊಂಡ ಎಂದಾಗ ನಮಗೆ ನಿಜಕ್ಕೂ ಗಾಬರಿಯಾಗುತ್ತದೆ. ಜೊತೆ ಜೊತೆಗೆ ಸೋಜಿಗವೂ ಆಗುತ್ತದೆ. ಯಾಕೆ ಆತ್ಮಹತ್ಯೆಯಂತಹ ಹೀನ ಕೃತ್ಯಕ್ಕೆ ಮನಸ್ಸು ಮಾಡಿದ? ತನ್ನೊಳಗಣ ಮನೋ ಒತ್ತಡಗಳನ್ನು ತಡೆದುಕೊಳ್ಳಲಾಗಲಿಲ್ಲವೆ? ಅಯ್ಯೋ! ನಾನು ಪ್ರಕಟಪಡಿಸಬೇಕೆಂದಿದ್ದ ಪ್ರಬಂಧವನ್ನು ನನಗಿಂತಲೂ ಮೊದಲೇ ಬೇರೊಬ್ಬರು ಪ್ರಕಟಪಡಿಸಿದನೆಂಬ ಅಸೂಯೆ ಕಾರಣವೆ? ಇಲ್ಲಿ ಗಮನಿಸಬೇಕಾದ, ಯೋಚಿಸಬೇಕಾದ ಮುಖ್ಯ ವಿಚಾರವೆಂದರೆ – ಅಂತಹ ಉನ್ನತ ಬೌದ್ಧಿಕ ಮಟ್ಟವನ್ನು ಹೊಂದಿದ್ದವನು ತನ್ನ ಮನಸ್ಸಿನ ಮೇಲೆ ನಿಯಂತ್ರಣವನ್ನು ಕಳೆದುಕೊಂಡುದ್ದಾದರೂ ಹೇಗೆ? ಎನ್ನುವುದು. ಶಿಕ್ಷಣ ಕ್ಷೇತ್ರದಲ್ಲಿ ಮೇರೆ ಮೀರಿದ ಕ್ರಾಂತಿಯಾಗುತ್ತದೆ. ಎಲ್ಲವನ್ನೂ ಕಲಿಸ ಹೊರಟ ಶಿಕ್ಷಣ ವ್ಯವಸ್ಥೆ ಮನುಷ್ಯನನ್ನು ಮನುಷ್ಯನನ್ನಾಗಿ ಬಾಳಲು ಏಕೆ ಕಲಿಸಲಿಲ್ಲ? ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಬಾಳುವುದನ್ನೇಕೆ ಕಲಿಸಲಿಲ್ಲ? ಮನೋ ಒತ್ತಡಗಳನ್ನು ತಡೆದುಕೊಂಡು ತಮ್ಮನ್ನು ತಾವು ಶಾಂತಿಯಡೆಗೆ ಕರೆದೊಯ್ಯಲು ಸಾಧ್ಯವಾಗುತ್ತಿಲ್ಲವೇಕೆ?

## To Gather – ಸ್ಮರಣೆ



## ಗೊರೂರು ರಾಮಸ್ವಾಮಿ ಅಯ್ಯಂಗಾರ್

9 ಜುಲೈ 2019 ರಂದು ದೈನಂದಿನ ಟು ಗ್ಯಾದರ್‌ನಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಸ್ಮರಿಸಿಕೊಳ್ಳಲಾಯಿತು. 4 ಜುಲೈ 1904 ರಲ್ಲಿ ಜನಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ತಮ್ಮ ಪ್ರಬಂಧ ಸಂಕಲಗಳಿಂದ ಕನ್ನಡ ಸಾಹಿತ್ಯದಲ್ಲಿ ಛಾಪು ಮೂಡಿಸಿದವರು. ಆರ್. ಕೆ. ನಾರಾಯಣ್ ಓದುಗರಿಗೆ ಮಾಲ್ಗುಡಿಯನ್ನು ಪರಿಚಯಿಸುವುದಕ್ಕೆ ಪೂರ್ವದಲ್ಲಿಯೇ ತಮ್ಮ ಕೃತಿಗಳ ಮೂಲಕ ರಾಮಸ್ವಾಮಿ ಅಯ್ಯಂಗಾರ್ ಅವರು ಗೊರೂರು ಗ್ರಾಮವನ್ನು ಪರಿಚಯಿಸಿದ್ದರು. ಸ್ವಾತಂತ್ರ್ಯ ಚಳುವಳಿ,

ಮೈಸೂರಿನಲ್ಲಿ ಪ್ರಜಾ ಸರ್ಕಾರಕ್ಕಾಗಿ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ಹೋರಾಡಿ ಹರಿಜನೋದ್ಧಾರ ಮತ್ತು ಗ್ರಾಮೋದ್ಧಾರಕ್ಕಾಗಿ ಶ್ರಮಿಸಿದ ಅವರೊಬ್ಬ ಅಪ್ರತಿಮ ಗಾಂಧಿವಾದಿ.

## ವಿಶ್ವ ಜನಸಂಖ್ಯಾ ದಿನ




11 ಜುಲೈ 2019 ರಂದು ದೈನಂದಿನ ಟು ಗ್ಯಾದರ್ ನಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಯಿತು. ಜುಲೈ 11 ರ ದಿನಾಂಕವನ್ನೂ 'ವಿಶ್ವ ಜನಸಂಖ್ಯಾ ದಿನ'ವೆಂದು ಕರೆಯಲಾಗುತ್ತಿದೆ. ಜಾಗತಿಕವಾಗಿ ಜನಸಂಖ್ಯೆ ಏರುತ್ತಿರುವ ವೇಗ ನೋಡಿ ವಿಶ್ವಸಂಸ್ಥೆ 1987ರ ವರ್ಷದಲ್ಲಿ ಈ ವಿಶ್ವ ಜನಸಂಖ್ಯಾ ದಿನಾಚರಣೆಗೆ ಮುನ್ನುಡಿ ಬರೆಯಿತು. ಆ ದಿನದಂದು ವಿಶ್ವ ಜನಸಂಖ್ಯೆ 5 ಬಿಲಿಯನ್ ತಲುಪಿತಂತೆ. ಹೀಗೆ ಈ ದಿನವನ್ನು ಆಚರಿಸುವುದರ ಮೂಲಕ ವಿಶ್ವದಲ್ಲಿ ಜನಸಂಖ್ಯೆಯ ಕುರಿತಾದ ವಿವಿಧ ಸಮಸ್ಯೆಗಳ ಕುರಿತಾಗಿ ವಿಶ್ವ ಸಮುದಾಯದ ಗಮನ ಸೆಳೆಯುವುದು ಈ ಆಚರಣೆಯ ಪ್ರಮುಖ ಉದ್ದೇಶ. ಇಂದಿನ ವಿಶ್ವದ ಜನಸಂಖ್ಯೆ – 7,577,130,400. ಇಂದಿನ ಭಾರತದ ಜನಸಂಖ್ಯೆ – 1,367,549,017.

## ರಾಷ್ಟ್ರೀಯ ಸೇವಾ ಯೋಜನೆಯಿಂದ ಶ್ರಮದಾನ



ಕಾಲೇಜಿನ ಆವರಣದಲ್ಲಿ ವೀಳ್ಯದ ಎಲೆಯ ಬಳ್ಳಿಯನ್ನು ನೆಡುತ್ತಿರುವ ವಿದ್ಯಾರ್ಥಿಗಳು. ಎರಡು ಮರಗಳಿಗೆ ಹಬ್ಬುವಂತೆ ಎರಡು ವೀಳ್ಯದ ಎಲೆಯ ಬಳ್ಳಿಗಳನ್ನು ಮತ್ತು ಬ್ರಹ್ಮ ಕಮಲ (ವರ್ಷಕೊಮ್ಮೆ ಹೂ ಬಿಡುವ ಅಪರೂಪದ ಸಸ್ಯ ಜಾತಿ) ಸಸಿಗಳನ್ನು ನೆಡಲಾಯಿತು.



13 ಜುಲೈ 2019 ರ ಶನಿವಾರ ಮಧ್ಯಾಹ್ನ 12.30 ರಿಂದ ೧.೩೦ ರವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ದೈನಂದಿನ ಕಾರ್ಯಕ್ರಮದ ಭಾಗವಾಗಿ ಕಾಲೇಜಿನ ಮುಂಭಾಗದಲ್ಲಿನ ರಸ್ತೆಯ ಇಬ್ಭಾಗವನ್ನು ಸ್ವಚ್ಛಗೊಳಿಸಿ, ಇಬ್ಭಾಗದಲ್ಲಿದ್ದ ಗಿಡಗಳಿಗೆ ಕಲ್ಲಿನ ಕಟ್ಟೆಯನ್ನು ಕಟ್ಟಿ ನೀರನ್ನು ಹಾಕಿದರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಧಿಕಾರಿಗಳಾದ ಕು. ಪ್ರಿಯಾಂಕ ಎಂ.ಎನ್ ಅವರು ಇದನ್ನು ನಿರ್ವಹಿಸಿದರು. ಕಾಲೇಜಿನ ವಿಭಾಗದ ಪ್ರಾಧ್ಯಾಪಕರೆಲ್ಲರು ಇದರಲ್ಲಿ ಪಾಲ್ಗೊಂಡಿದ್ದರು.

**India of My Dreams - M. K. Gandhi**

*The word Swaraj is a sacred word, a Vedic word, meaning self-rule and self-restraint, and not freedom from all restraint which 'independence' often means.*

**-*Young India, 19-3-31***

**ವರದಿಗಾರರು**

ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ

**ಛಾಯಾಚಿತ್ರ ಕೃಪೆ**

ಡಾ. ಪ್ರಭಾಕರ ಕೆ. ವಿ. ನಿರ್ದೇಶಕರು
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಅನಿಲ್. ಎಂ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಕು. ಪ್ರಿಯಾಂಕ. ಎಂ. ಎನ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ

**Photo Corner**

